# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

# कर्नाटक-संस्कृत-विश्वविद्यालय:

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.


ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 53ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಸೆಪ್ಟೆಂಬರ್ 12ರಂದು ಗುರುವಾರ ಅಪರಾಹ್ನ 3.30** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ವಿ. ಗಿರೀಶ್ ಚಂದ್ರ**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. | **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001 | ಸದಸ್ಯರು |
| ೫. | **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| | – ಪರವಾಗಿ **ಶ್ರೀಮತಿ ಕಾವ್ಯಶ್ರೀ ಎಂ**, ಸಹಾಯಕ ನಿರ್ದೇಶಕರು | ಸದಸ್ಯರು |
| ೬. | **ಪ್ರೊ. ವೀರನಾರಾಯಣ ಎನ್.ಕೆ ಪಾಂಡುರಂಗಿ**, ಕುಲಸಚಿವರು(ಪ್ರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಉಪ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು-09 | ಸದಸ್ಯರು |
| ೫. | **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 | ಸದಸ್ಯರು |
| ೬. | **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು-560001 | ಸದಸ್ಯರು |
| ೭. | **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು-560012 | ಸದಸ್ಯರು |
| ೮. | **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009 | ಸದಸ್ಯರು |
| ೯. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

## 2019ರ ಸೆಪ್ಟೆಂಬರ್ 12ರಂದು ನಡೆಯುವ ಪ್ರಶಾಸನ ಸಮಿತಿ (ಸಿಂಡಿಕೇಟ್) 53ನೇ ಸಭೆಯ ಕಾರ್ಯಸೂಚಿ

| ವಿ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಾಸನ ಸಮಿತಿ 52ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 52ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 12.06.2019ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ನಿರ್ಣಯ | **52ನೇ ಪ್ರಶಾಸನ ಸಮಿತಿಯ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.** | |
| ವಿಷಯ 02 | **ವಿವಿಧ ಸಂಸ್ಥೆಗಳ ಜೊತೆಯಲ್ಲಿ ಸಂಸ್ಕೃತೋತ್ಸವ ಹಮ್ಮಿಕೊಂಡಿರುವುದರ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಪ್ರತಿ ವರ್ಷದಂತೆಯೇ 2019-20ನೇ ಸಾಲಿನಲ್ಲಿಯೂ ಶ್ರಾವಣ ಮಾಸದಲ್ಲಿ ಸಂಸ್ಕೃತೋತ್ಸವ ಆಚರಿಸಬೇಕೆಂದು ತೀರ್ಮಾನಿಸಲಾಗಿದೆ. ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತಾಧ್ಯಾಪಕ ಸಂಘ(ರಿ), ಶೃಂಗೇರೀ ಸುರಸರಸ್ವತೀ ಸಭಾ(ರಿ), ಕೇಂದ್ರೀಯವಿದ್ಯಾಲಯಸಂಸ್ಕೃತಾಧ್ಯಾಪಕರು, ಸಂಸ್ಕೃತ ಭಾರತೀ, ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಗೀತಗೋವಿಂದ ಸಂಸ್ಕೃತ ಸಂಘ, ಪ್ರಜ್ಞಾವರ್ಧಿನೀ ಟ್ರಸ್ಟ್, | |

| | | |
|---|---|---|
| | ವೇದವಿಜ್ಞಾನಗುರುಕುಲಮ್, ಸುರಭಾರತೀ ಸಂಸ್ಕೃತ ಸಂಸ್ಕೃತಿ ಪ್ರತಿಷ್ಠಾನಮ್, ವ್ಯೋಮ ಲಿಂಗ್ವಿಸ್ಟಿಕ್ ಲ್ಯಾಬ್ಸ್ ಫೌಂಡೇಶನ್, ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧ ಕೇಂದ್ರ, ರಸಧ್ವನಿ ಕಲಾಕೇಂದ್ರ, ಭಾರತೀಯ ವಿದ್ವತ್ ಪರಿಷತ್ ಮುಂತಾದ ಸಂಸ್ಥೆಗಳ ಸಹಯೋಗದೊಂದಿಗೆ ಸಂಸ್ಕೃತೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು, ವಿಚಾರ ಸಂಕಿರಣಗಳನ್ನು ಮತ್ತು ವಿಶೇಷೋಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಒಟ್ಟೂ 1.50ಲಕ್ಷ ವೆಚ್ಚ ಅಂದಾಜಿಸಲಾಗಿದ್ದು ಈ ಮೊತ್ತಕ್ಕೆ ಅನುಮೋದನೆ ಕೋರಿದೆ. | |
| ನಿರ್ಣಯ | **ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಸಂಸ್ಕೃತೋತ್ಸವ ನಡೆಸಿರುವ ಬಗ್ಗೆ ಪ್ರಶಾಸನ ಸಮಿತಿಯು ಮೆಚ್ಚುಗೆ ವ್ಯಕ್ತಪಡಿಸಿತು. ವಿಚಾರ ಸಂಕಿರಣ, ವಿಶೇಷೋಪನ್ಯಾಸ ಮುಂತಾದ ಕಾರ್ಯಕ್ರಮಕ್ಕೆ 1.50ಲಕ್ಷ ರೂಗಳನ್ನು ವ್ಯಯ ಮಾಡಲು ಅನುಮತಿಸಿತು.** | |
| ವಿಷಯ 03 | **K.R.I.D.L ಗೆ ಕಾಮಗಾರಿ ವಹಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಈಗಾಲೇ ನಿರ್ಮಾಣ ಮಾಡಲಾದ ನೂತನ ಕೊಠಡಿಗಳಲ್ಲಿ Wood Work, Steel Work ಹಾಗೂ ಹಳೆಯ ನೆಲಮಹಡಿ ಕೊಠಡಿಗಳಲ್ಲಿ Granite, Painting, ಶೈಕ್ಷಣಿಕ ನಿಕಾಯ ಪ್ರಾಧ್ಯಾಪಕರಿಗೆ, ಶಾಸ್ತ್ರವಾರು ಪ್ರತ್ಯೇಕ ಕುಳಿತುಕೊಳ್ಳಲು ಆಸನಗಳು, ಅವಶ್ಯವಿದ್ದ ನಿಕಾಯಾಧ್ಯಕ್ಷರ ವಿಭಾಗ, ಟೇಬಲ್ ಹಾಗೂ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಚೇರ್ ಮತ್ತು ಬೆಂಚ್‌ಗಳನ್ನು ಸರಬರಾಜು ಮಾಡಲು ಈಗಾಗಲೇ ಅಂದಾಜು ಪಟ್ಟಿ ನೀಡಿದ್ದು, 49.85 ಲಕ್ಷಗಳನ್ನು ಅಂದಾಜಿಸಲಾಗಿದೆ. ಈ ಮೊತ್ತಕ್ಕೆ ಅನುಮೋದನೆ ನೀಡಿ ಕಾಮಗಾರಿ ಪ್ರಾರಂಭಿಸಲು ಆಡಳಿತಾತ್ಮಕ ಅನುಮತಿ ನೀಡಲಾಗಿದೆ. ಇದಕ್ಕೆ ಘಟನೋತ್ತರ ಅನುಮತಿ ಕೋರಿ ಸಭೆಯಲ್ಲಿ ವಿಷಯ ಮಂಡಿಸಿದೆ. | |
| ನಿರ್ಣಯ | **K.R.I.D.L ಗೆ ಕಾಮಗಾರಿ ವಹಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಲಾಗಿದೆ.** | |
| ವಿಷಯ 04 | **ಆಧುನಿಕ ಕವಿ–ಕಾವ್ಯ ಸ್ಮೃತಿ ಕಾರ್ಯಕ್ರಮವನ್ನು ಪ್ರಾರಂಭಿಸುವುದಕ್ಕೆ ಅನುಮತಿ ನೀಡುವ ಬಗೆಗೆ.**<br>ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 11 ಅನುದಾನಿತ ಸಂಸ್ಕೃತ ಮಹಾವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮಹಾವಿದ್ಯಾಲಯಗಳ ಸಹಯೋಗದೊಂದಿಗೆ ಆಯಾ ಜಿಲ್ಲೆಯಲ್ಲಿರುವ ಆಧುನಿಕ ಸಂಸ್ಕೃತಜ್ಞರ ಕೃತಿಗಳನ್ನು ಪ್ರಚುರಪಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದಾಗಿದೆ. **"ಆಧುನಿಕ ಕವಿ–ಕಾವ್ಯ ಸ್ಮೃತಿ"** ಎಂಬ ಶೀರ್ಷಿಕೆಯ ಅಡಿಯಲ್ಲಿ ಅನುದಾನಿತ ಮಹಾವಿದ್ಯಾಲಯಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲು ಒಪ್ಪಿಗೆಗಾಗಿ ಸಭೆಯಲ್ಲಿ ವಿಷಯ ಮಂಡಿಸಿದೆ. | |
| ನಿರ್ಣಯ | **ಆಧುನಿಕ ಕವಿ–ಕಾವ್ಯ ಸ್ಮೃತಿ ಕಾರ್ಯಕ್ರಮವನ್ನು ಅನುದಾನಿತ ಮಹಾವಿದ್ಯಾಲಯಗಳ ಸಹಯೋಗದೊಂದಿಗೆ ಆಯೋಜಿಸಲು ಒಪ್ಪಿಗೆ ನೀಡಲಾಯಿತು.** | |
| ವಿಷಯ 05 | **ಮಹಾಕಾವ್ಯಗಳ ಸಂಸ್ಕೃತ ವಾಚನ– ವ್ಯಾಖ್ಯಾನ ಮಾಲಿಕೆಯನ್ನು ಮುಂದುವರೆಸುವುದರ ಬಗ್ಗೆ.**<br>ವಿಶ್ವವಿದ್ಯಾಲಯದ ಆವರಣದಲ್ಲಿ ದಿನಾಂಕ: 19.07.2019ರಿಂದ ಮೊದಲ್ಗೊಂಡು 20.09.2019ರವರೆಗೆ ಪ್ರತಿ ಶುಕ್ರವಾರ ಸಂಸ್ಕೃತದ ಪಂಚ ಮಹಾಕಾವ್ಯಗಳ ಆಯ್ದಭಾಗಗಳನ್ನು ವಿವಿಧ ವಿದ್ವಾಂಸರಿಂದ ವಾಚನ ಮತ್ತು ವ್ಯಾಖ್ಯಾನ ಮಾಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಬಹುಜನರ ಮನ್ನಣೆಯನ್ನು ಪಡೆದು ಪ್ರಸಿದ್ಧವಾದ ಕಾರಣ ಈ ಕಾರ್ಯಕ್ರಮವನ್ನು ಮುಂದುವರೆಸಲು ವಿಶ್ವವಿದ್ಯಾಲಯವು ಇಚ್ಛಿಸಿದೆ. ಇನ್ನು ಮುಂದೆ ಚಂಪೂ ಕಾವ್ಯಗಳ ವಾಚನ–ವ್ಯಾಖ್ಯಾನವನ್ನು ಆಯೋಜಿಸಲು ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. | |
| ನಿರ್ಣಯ | **ಮಹಾಕಾವ್ಯಗಳ ಸಂಸ್ಕೃತ ವಾಚನ– ವ್ಯಾಖ್ಯಾನ ಮಾಲಿಕೆಯನ್ನು ಆಯೋಜಿಸಲು ಸಭೆಯು ಒಪ್ಪಿಗೆ ನೀಡಿತು.** | |
| ವಿಷಯ 06 | **ಪರೀಕ್ಷಾ ನಿಯಂತ್ರಕರನ್ನು ನೇಮಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.**<br>ಡಾ. ಬಿ.ವಿ. ವೆಂಕಟರಮಣ – ಇವರು ಫೆಬ್ರವರಿ 2015ರಿಂದ ಪರೀಕ್ಷಾ ನಿಯಂತ್ರಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರನ್ನು ಈ ಮಧ್ಯೆ ಅಧ್ಯಯನಾಂಗದ ನಿರ್ದೇಶಕರನ್ನಾಗಿಯೂ ನಿಯೋಜನೆ ಮಾಡಲಾಗಿತ್ತು. ಆದ್ದರಿಂದ ತಮ್ಮನ್ನು ಪರೀಕ್ಷಾ ನಿಯಂತ್ರಕ ಹುದ್ದೆಯಿಂದ ಬಿಡುಗಡೆಗೊಳಿಸಬೇಕೆಂದು | |

| | | |
|---|---|---|
| | ಹಲವಾರು ಬಾರಿ ಮಾನ್ಯ ಕುಲಪತಿಗಳಿಗೆ ಮನವಿ ಸಲ್ಲಿಸಿದ್ದರು. ಇವರನ್ನು ಪರೀಕ್ಷಾ ನಿಯಂತ್ರಕ ಹುದ್ದೆಯಿಂದ ಬಿಡುಗಡೆಗೊಳಿಸಲು ದಿನಾಂಕ: 22.06.2018ರಂದು ನಡೆದ 46ನೇ ಪ್ರಶಾಸನ ಸಮಿತಿಯ ವಿಷಯ ಸಂಖ್ಯೆ 11ರ ನಿರ್ಣಯದಂತೆ ತಾತ್ವಿಕ ಒಪ್ಪಿಗೆ ನೀಡಲಾಗಿತ್ತು. ಆದ್ದರಿಂದ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಪಾಲಯ್ಯ. ಸಿ ಇವರನ್ನು ದಿನಾಂಕ: 19.08.2019ರಿಂದ ಪರೀಕ್ಷಾ ನಿಯಂತ್ರಕರನ್ನಾಗಿ ನಿಯೋಜಿಸಿ ಆದೇಶಿಸಲಾಗಿದೆ. ಇದಕ್ಕೆ ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. | |
| ನಿರ್ಣಯ | **ಪ್ರೊ. ಬಿ.ವಿ ವೆಂಕಟರಮಣ ಇವರನ್ನು ಬಿಡುಗಡೆಗೊಳಿಸಿ ಪರೀಕ್ಷಾ ನಿಯಂತ್ರಕರನ್ನಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಪಾಲಯ್ಯ. ಸಿ ಇವರನ್ನು ನೇಮಿಸಿರುವುದಕ್ಕೆ ಸಭೆಯು ಘಟನೋತ್ತರ ಅನುಮತಿ ನೀಡಿತು.** | |
| ವಿಷಯ 07 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಕೃಷ್ಣ ಜೋಶಿ– ಇವರಿಗೆ ಗಳಿಕೆ ರಜೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನಿಯುಕ್ತಿಗೊಂಡಿರುವ ಡಾ. ಕೃಷ್ಣ ಜೋಶಿ ಇವರನ್ನು 23.01.2015ರಂದು ಗೋಕರ್ಣದಲ್ಲಿರುವ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾಗಿ ನಿಯೋಜಿಸಿ ಆದೇಶ ನೀಡಲಾಗಿದೆ. 01.02.2015 ರ ಪೂರ್ವಾಹ್ನದಿಂದ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿಯವರು ಪ್ರಾಚಾರ್ಯರ ಕರ್ತವ್ಯಕ್ಕೆ ಸಿಗಬೇಕಾದ ಗಳಿಕೆ ರಜೆ ಸೌಲಭ್ಯ ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ 01.02.2015ರಿಂದ ಇಲ್ಲಿಯವರೆಗಿನ ಗಳಿಕೆ ರಜೆಗಳನ್ನು ನೀಡಲು ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. | |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಕೃಷ್ಣ ಜೋಶಿ– ಇವರಿಗೆ ಗಳಿಕೆ ರಜೆ ನೀಡುವುದಕ್ಕೆ ಸಭೆಯು ಒಪ್ಪಿಗೆ ನೀಡಿದೆ.** | |
| ವಿಷಯ 08 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕೇತರ ಕಾರ್ಯ ನಿರ್ವಹಿಸುವ ಬೋಧಕ ಸಿಬ್ಬಂದಿಗಳಿಗೆ ಗಳಿಕೆ ರಜೆ ಮತ್ತು ಅರ್ಧ ವೇತನ ರಜೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಬಿ.ವಿ. ವೆಂಕಟರಮಣ ಇವರು ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾಗಿ ಮತ್ತು ಅಧ್ಯಯನಾಂಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಂತೆಯೇ ಪ್ರೊ. ವೀರನಾರಾಯಣ ಎನ್. ಕೆ ಪಾಂಡುರಂಗಿರವರು ಅಧ್ಯಯನಾಂಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೇ ಪ್ರಸ್ತುತ ಪರೀಕ್ಷಾಂಗದ ನಿಯಂತ್ರಕರಾದ ಪ್ರಾಧ್ಯಾಪಕರಾದ ಪ್ರೊ. ಸಿ. ಪಾಲಯ್ಯರವರು ಬೋಧಕ ಸಿಬ್ಬಂದಿಯಾಗಿರುತ್ತಾರೆ. ಆದ್ದರಿಂದ **ಶೈಕ್ಷಣಿಕೇತರ ಕಾರ್ಯ ನಿರ್ವಹಿಸುವ ಬೋಧಕ ಸಿಬ್ಬಂದಿಗಳಿಗೆ** ಬೋಧಕೇತರ ಹುದ್ದೆಗಳಿಗೆ ಸಿಗುವ ಗಳಿಕೆ ರಜೆ ಮತ್ತು ಅರ್ಧ ವೇತನ ರಜೆಗಳನ್ನು ನಿಯಮಾನುಸಾರ ನೀಡಲು ಅನುಮತಿ ಕೋರಿ ಸಭೆಯ ಅನುಮತಿ ಕೋರಿದೆ. | |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕೇತರ ಕಾರ್ಯ ನಿರ್ವಹಿಸುವ ಬೋಧಕ ಸಿಬ್ಬಂದಿಗಳಿಗೆ ಗಳಿಕೆ ರಜೆ ಮತ್ತು ಅರ್ಧ ವೇತನ ರಜೆಯನ್ನು ಶೈಕ್ಷಣಿಕೇತರ ಕಾರ್ಯನಿರ್ವಹಿಸಿರುವ ಅವಧಿಗೆ ನೀಡಲು ಸಭೆಯು ಅನುಮತಿ ನೀಡಿತು. ಈ ಅವಧಿಯಲ್ಲಿ ನಿರ್ವಹಿಸಿರುವ ಕಾರ್ಯಗಳ ಕುರಿತು ವರದಿ ನೀಡಲು ಸೂಚಿಸಿತು.** | |
| ವಿಷಯ 09 | **ಪ್ರಸಾರಾಂಗದ ನಿರ್ದೇಶಕರನ್ನು ನೇಮಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಲ್ಲಿಯವರೆಗೆ ನಿರ್ದೇಶಕರನ್ನು ನಿಯೋಜಿಸಲಾಗಿರಲಿಲ್ಲ. ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪ್ರಾಧ್ಯಾಪಕ ಶ್ರೇಣಿಯಲ್ಲಿರುವವರನ್ನು ನಿರ್ದೇಶಕರನ್ನಾಗಿ ನಿಯೋಜಿಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವಿ. ಶಿವಾನಿ ಇವರನ್ನು ದಿನಾಂಕ: 13.08.2019ರಂದು ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ಪ್ರಸಾರಾಂಗದ ನಿರ್ದೇಶಕರನ್ನಾಗಿ ನಿಯೋಜಿಸಿ ಆದೇಶ ನೀಡಲಾಗಿದ್ದು ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. | |
| ನಿರ್ಣಯ | **ಪ್ರೊ. ವಿ. ಶಿವಾನಿ ಇವರಿಗೆ ಯಾವುದೇ ಆರ್ಥಿಕ ಸೌಲಭ್ಯಗಳಿಲ್ಲದೇ ಪ್ರಸಾರಾಂಗದ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಸಭೆಯು ಘಟನೋತ್ತರ ಅನುಮೋದನೆ ನೀಡಿತು.** | |
| ವಿಷಯ 10 | **IQAC ನಿರ್ದೇಶಕರನ್ನು ನೇಮಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.** | |

| | | |
|---|---|---|
| | ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ಇರುವಂತೆ ನಮ್ಮ ವಿಶ್ವವಿದ್ಯಾಲಯದಲ್ಲಿಯೂ **"ಆಂತರಿಕ ಗುಣಮಟ್ಟ ನಿರ್ವಹಣಾ ಕೇಂದ್ರ"** (Internal Quality Assurance Cell) ಸ್ಥಾಪಿಸಲು ಈ ಹಿಂದೆ 01.06.2017ರಂದು ನಡೆದ 38ನೇ ಪ್ರಶಾಸನ ಸಮಿತಿಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಈ "ಆಂತರಿಕ ಗುಣಮಟ್ಟ ನಿರ್ವಹಣಾ ಕೇಂದ್ರ" ಕ್ಕೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಪಾಲಯ್ಯ ಸಿ. ಇವರನ್ನು ನಿಯೋಜಿಸಿ ಆದೇಶಿಸಲಾಗಿದೆ. ಇದಕ್ಕೆ ಘಟನೋತ್ತರ ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. | |
| ನಿರ್ಣಯ | **"ಆಂತರಿಕ ಗುಣಮಟ್ಟ ನಿರ್ವಹಣಾ ಕೇಂದ್ರ"ಕ್ಕೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಪಾಲಯ್ಯ ಸಿ. ಇವರನ್ನು ನೇಮಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಲಾಗಿದೆ.** | |
| ವಿಷಯ 11 | **ವಿಶ್ವವಿದ್ಯಾಲಯದ ನಿಕಾಯಾಧ್ಯಕ್ಷರ ಸಮಿತಿಯನ್ನು ರಚಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಇತರ ವ್ಯವಹಾರಗಳನ್ನು ನಿರ್ಣಯಿಸಲು ಸಿಂಡಿಕೇಟ್ ಸಭೆಯ ಸ್ಥಾಯೀ ಸಮಿತಿಯನ್ನಾಗಿ ನಿಕಾಯಾಧ್ಯಕ್ಷರ ಸಮಿತಿ (ಡೀನ್ ಕೌನ್ಸಿಲ್)ಯನ್ನು ರಚಿಸಬಹುದಾಗಿದೆ. ಈ ಸಭೆಯು ಪ್ರಶಾಸನ ಸಮಿತಿಯ ಘಟನೋತ್ತರ ಅನುಮತಿಯನ್ನು ನಿರೀಕ್ಷಿಸಿ, ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಇತರ ವ್ಯವಹಾರಗಳಲ್ಲಿ ಅತ್ಯಂತ ತುರ್ತಾಗಿರುವ ಮತ್ತು ವಿಶ್ವವಿದ್ಯಾಲಯದ ಹಿತವನ್ನನುಲಕ್ಷಿಸುವ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತದೆ. ಈ ವಿಷಯಕ್ಕೆ ಅನುಮತಿ ಕೋರಿ ಸಭೆಯಲ್ಲಿ ವಿಷಯ ಮಂಡಿಸಿದೆ. | |
| ನಿರ್ಣಯ | **ಮಾನ್ಯ ಕುಲಪತಿಗಳು ನಿಕಾಯಾಧ್ಯಕ್ಷರ ಸಮಿತಿಯನ್ನು ರಚಿಸಬಹುದಾಗಿದೆ. ಮಾನ್ಯ ಕುಲಪತಿಗಳು ನಿಕಾಯಾಧ್ಯಕ್ಷರ ಸಭೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳಬಹುದು. ನಿರ್ಣಯಗಳನ್ನು ಪ್ರಶಾಸನ ಸಮಿತಿಯ ಸಭೆಯಲ್ಲಿ ಘಟನೋತ್ತರ ಅನುಮತಿಗಾಗಿ ಸಲ್ಲಿಸಬಹುದಾಗಿದೆ.** | |
| ವಿಷಯ 12 | **2019-20ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಹಸ್ತಸಾಮುದ್ರಿಕ ಶಾಸ್ತ್ರದ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ಬಗೆಗೆ**<br>ವಿಶ್ವವಿದ್ಯಾಲಯವು ಈಗಾಗಲೇ ಜ್ಯೋತಿಷ್ಯ ಮತ್ತು ವಾಸ್ತುಶಾಸ್ತ್ರದ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿದೆ. ಮುಂದುವರೆದು KSFAAI ಅವರು ನೀಡಿರುವ ಮನವಿಯನ್ನು ಪುರಸ್ಕರಿಸಿ ವಿಶ್ವವಿದ್ಯಾಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿತ್ತು. ಕೆಲವೊಂದು ಅಗತ್ಯ ಸೂಚನೆಗಳು ಮತ್ತು ಬದಲಾವಣೆಗಳೊಂದಿಗೆ 2019-20ನೇ ಸಾಲಿನಿಂದ ಹಸ್ತಸಾಮುದ್ರಿಕ ಶಾಸ್ತ್ರದ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ಬಗ್ಗೆ ಸಭೆಯ ಅನುಮತಿ ಕೋರಿ ವಿಷಯ ಮಂಡಿಸಲಾಗಿದೆ. | |
| ನಿರ್ಣಯ | **ವಿಶ್ವವಿದ್ಯಾಲಯದಲ್ಲಿ 2019-20ನೇ ಸಾಲಿನಿಂದ ಹಸ್ತಸಾಮುದ್ರಿಕ ಶಾಸ್ತ್ರದ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲು ಸಭೆಯು ಅನುಮತಿ ನೀಡಿದೆ.** | |
| ವಿಷಯ 13 | **ಕೆಳದಿಯಲ್ಲಿರುವ "ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನ ಕೇಂದ್ರ"ವನ್ನು ವಿಶ್ವವಿದ್ಯಾಲಯದ ಸುಪರ್ದಿಗೆ ಪಡೆಯಲು ಅನುಮತಿ ನೀಡುವ ಬಗೆಗೆ.**<br>ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಇತಿಹಾಸಪ್ರಸಿದ್ಧವಾದ ಕೆಳದಿ ಎಂಬ ಕ್ಷೇತ್ರವಿದೆ. ಇಲ್ಲಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನ ಕೇಂದ್ರವು ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ- ಇದರಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸುಮಾರು 4000 ಹಸ್ತಪ್ರತಿಯನ್ನೊಳಗೊಂಡ ಅನುದಾನಿತ ಸಂಸ್ಥೆಯಾದ ಇದನ್ನು ವೇತನಾನುದಾನ ಸಂಹಿತೆ ಸಹಿತವಾಗಿ ವಿಶ್ವವಿದ್ಯಾಲಯಕ್ಕೆ ಅಧೀನಪಡಿಸಿಕೊಂಡಲ್ಲಿ ಇನ್ನಷ್ಟು ಅಭಿವೃದ್ಧಿಪಡಿಸಬಹುದಾಗಿದ್ದು ಮುಂದಿನ ಕ್ರಮಗಳಿಗಾಗಿ ಒಪ್ಪಿಗೆ ನಿರೀಕ್ಷಿಸಿ ಸಭೆಯಲ್ಲಿ ವಿಷಯ ಮಂಡಿಸಿದೆ. | |
| ನಿರ್ಣಯ | **ಕೆಳದಿಯಲ್ಲಿರುವ "ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನ ಕೇಂದ್ರ"ವನ್ನು ವಿಶ್ವವಿದ್ಯಾಲಯದ ಸುಪರ್ದಿಗೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ಒಪ್ಪಿಗೆ ನೀಡಿದೆ.** | |
| ವಿಷಯ 14 | **ವೀರನಾರಾಯಣ ಎನ್.ಕೆ ಪಾಂಡುರಂಗಿ- ಇವರನ್ನು ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ನೇಮಿಸಿರುವ ಬಗೆಗೆ.**<br>ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀಮತಿ ಶಿಲ್ಪ. ಎಂ, ಕ.ಆ.ಸೇ. ಇವರ ಕಾರ್ಯಭಾರದ ಅವಧಿಯು ಕರ್ನಾಟಕ ಸರ್ಕಾರದ ಆದೇಶದಂತೆ ದಿನಾಂಕ: 30.06.2019ರಂದು ಕೊನೆಗೊಂಡಿರುತ್ತದೆ. ಆದ್ದರಿಂದ ವಿಶ್ವವಿದ್ಯಾಲಯದ ಅಧಿನಿಯಮಗಳ ಅನುಸಾರ ಹಿರಿಯ ಪ್ರಾಧ್ಯಾಪಕರಾದ ಪ್ರೊ. ವೀರನಾರಾಯಣ ಎನ್.ಕೆ. ಪಾಂಡುರಂಗಿ – ಇವರನ್ನು ದಿನಾಂಕ: | |

| | | |
|---|---|---|
| | 01.07.2019ರಿಂದ ಕುಲಸಚಿವ ಹುದ್ದೆಯ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ. ಇದನ್ನು ಸಮಿತಿಯ ಅವಗಾಹನೆಗೆ ತರಲಾಗಿದೆ. | |
| ನಿರ್ಣಯ | **ವೀರನಾರಾಯಣ ಎನ್.ಕೆ ಪಾಂಡುರಂಗಿ– ಇವರನ್ನು ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ನೇಮಿಸಿರುವುದಕ್ಕೆ ಸಭೆಯು ಒಪ್ಪಿಗೆ ಸೂಚಿಸಿದೆ.** | |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು** | | |
| ವಿಷಯ 01 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರನ್ನು ನೇಮಿಸಿರುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಪ್ರೊ. ವಿ. ಗಿರೀಶ್ ಚಂದ್ರ ಇವರನ್ನು 26.06.2013ರಂದು ಪ್ರಭಾರ ನಿರ್ದೇಶಕರನ್ನಾಗಿ ನೇಮಿಸಲಾಗಿತ್ತು. ನಿರ್ದೇಶಕರನ್ನು ಬದಲಾಯಿಸಲು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ದಿನಾಂಕ: 12.06.2019ರಂದು ನಡೆದ 52ನೇ ಸಭೆಯಲ್ಲಿ ವಿಷಯ ಮಂಡಿಸಲಾಗಿತ್ತು. ಆದರೆ ಸಮಿತಿಯು **"ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಸಕ್ತ ನಿರ್ದೇಶಕರಾದ ಪ್ರೊ. ವಿ. ಗಿರೀಶ್‌ಚಂದ್ರರವರನ್ನು ತಾತ್ಕಾಲಿಕವಾಗಿ ಮುಂದುವರೆಸಲು"** ನಿರ್ಣಯಿಸಿದ ಹಿನ್ನೆಲೆಯಲ್ಲಿ ಅದೇ ಸ್ಥಿತಿಯನ್ನು ಕಾಯ್ದುಕೊಳ್ಳಲಾಗಿತ್ತು. ಆದರೆ ದಿನಾಂಕ: 15.06.2019ರ ಸರ್ಕಾರಿ ಆದೇಶದಂತೆ ಡಾ. ಪ್ರಕಾಶ್ ಆರ್. ಪಾಗೋಜಿ, ಉಪಕುಲಸಚಿವರು, ಕಸಂವಿ – ಇವರನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಇದನ್ನು ಪ್ರಶಾಸನ ಸಮಿತಿ ಸಭೆಯ ಗಮನಕ್ಕೆ ತರಲು ವಿಷಯ ಮಂಡಿಸಿದೆ. | |
| ನಿರ್ಣಯ | **ಡಾ. ಪ್ರಕಾಶ್ ಆರ್. ಪಾಗೋಜಿ, ಉಪಕುಲಸಚಿವರು, ಕಸಂವಿ–ಇವರನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರನ್ನಾಗಿ ನೇಮಿಸಿ ಆದೇಶಿಸಲಾಗಿರುವುದನ್ನು ಸಭೆಯು ಗಮನಿಸಿತು.** | |
| ವಿಷಯ 02 | **ಅನುದಾನಿತ ಸಂಸ್ಕೃತ ಪಾಠಶಾಲೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ನೀಡಿದ್ದಕ್ಕೆ ಹೆಚ್ಚುವರಿಯಾಗಿ ಭರಿಸಬೇಕಾದ ಮೊತ್ತಕ್ಕೆ ಅನುಮೋದನೆ ನೀಡುವ ಬಗೆಗೆ.**<br>ದಿನಾಂಕ: 28.12.2016ರಲ್ಲಿ ನಡೆದ 35ನೇ ಪ್ರಶಾಸನ ಸಮಿತಿಯ ನಿರ್ಣಯದಂತೆ ಅನುದಾನಿತ ಸಂಸ್ಕೃತ ಪಾಠಶಾಲೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ–ಪುಸ್ತಕ ನೀಡಲು ತೀರ್ಮಾನಿಸಲಾಗಿತ್ತು. ಅದರಂತೆ ಪಾಠಶಾಲೆಗಳಿಂದ ಪಡೆದ ಜಾತಿವಾರು ವಿದ್ಯಾರ್ಥಿಗಳ ಅಂಕಿ–ಅಂಶಗಳ ಅನುಸಾರ ಪುಸ್ತಕಗಳಿಗಾಗಿ 6,26,743 ರೂಗಳನ್ನು ಅಂದಾಜಿಸಿ ಈ ಮೊತ್ತವನ್ನು ಬಿಡುಗಡೆ ಮಾಡಲಾಗಿತ್ತು. ಆದರೆ ಪುಸ್ತಕಗಳ ಪ್ರತಿಗಳು ಮುಗಿದು ಹೋಗಿದ್ದು, ಇದೀಗ ಮರುಮುದ್ರಣ ಮಾಡಲಾಗಿದೆ. ಈಗಿನ ಬೆಲೆಗಳ ಪ್ರಕಾರ ಉಚಿತವಾಗಿ ಪಠ್ಯ–ಪುಸ್ತಕಗಳನ್ನು ನೀಡಿದರೆ ಒಟ್ಟು– 8,90,300 ರೂಗಳು ಬೇಕಾಗುತ್ತವೆ. ಆದ್ದರಿಂದ ಹೆಚ್ಚುವರಿಯಾಗಿ ಬೇಕಾಗುವ 2,63,557ರೂಗಳನ್ನು ಪ್ರಸಾರಾಂಗಕ್ಕೆ ಪಾವತಿಸಲು ಅನುಮತಿ ಕೋರಿ ಸಭೆಯಲ್ಲಿ ವಿಷಯವನ್ನು ಮಂಡಿಸಿದೆ. | |
| ನಿರ್ಣಯ | **ಅನುದಾನಿತ ಸಂಸ್ಕೃತ ಪಾಠಶಾಲೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ನೀಡಿದ್ದಕ್ಕೆ ಹೆಚ್ಚುವರಿಯಾಗಿ ಭರಿಸಬೇಕಾದ 2,63,557ರೂಗಳನ್ನು ಪ್ರಸಾರಾಂಗಕ್ಕೆ ಪಾವತಿಸಲು ಸಭೆಯ ಅನುಮತಿ ನೀಡಲಾಗಿದೆ.** | |
| ವಿಷಯ 03 | **ಶೋಧ ಪ್ರಬಂಧ ಸಮರ್ಪಣಾ ಪೂರ್ವ ಸಂವಾದ ಸಭೆಗೆ ಹಾಜರಾಗಿರುವ ಶೋಧ ಮಾರ್ಗದರ್ಶಕರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಾವತಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಪಿಎಚ್.ಡಿ (ವಿದ್ಯಾವಾರಿಧಿ) ಕೋರ್ಸ್‌ನ ನಿಯಮಾವಳಿಗಳ ಪ್ರಕಾರ ಶೋಧ ಪ್ರಬಂಧ ಸಮರ್ಪಣಾ ಪೂರ್ವ ಸಂವಾದ ಸಭೆ(Pre-colloquium)ಗೆ ಶೋಧಮಾರ್ಗದರ್ಶಕರು ಹಾಜರಿರಬೇಕಾಗುತ್ತದೆ. ಮಾರ್ಗದರ್ಶಕರಿಗೆ ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಾವತಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೆ ಬೆಂಗಳೂರಿನಿಂದ ಹೊರಭಾಗದಲ್ಲಿರುವ ಶೋಧ ಪ್ರಬಂಧ ಸಮರ್ಪಣಾ ಪೂರ್ವ ಸಭೆಗೆ ಹಾಜರಾಗಿರುವ ಶೋಧ ಮಾರ್ಗದರ್ಶಕರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಾವತಿಸುವಂತೆ ಕೋರಿ ಮಾರ್ಗದರ್ಶಕರು ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಇದನ್ನು ಪ್ರಶಾಸನ ಸಮಿತಿ ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ. | |
| ನಿರ್ಣಯ | **ಶೋಧ ಪ್ರಬಂಧ ಸಮರ್ಪಣಾ ಪೂರ್ವ ಸಂವಾದ ಸಭೆಗೆ ಹಾಜರಾಗಿರುವ ಶೋಧ ಮಾರ್ಗದರ್ಶಕರಿಗೆ ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಾವತಿಸುವಂತೆ ಸಭೆಯು ತಿಳಿಸಿತು.** | |

| | | |
|---|---|---|
| ವಿಷಯ 04 | **ಗುಂಪು ವಿಮೆ ಸೌಲಭ್ಯವನ್ನು ವಿಶ್ವವಿದ್ಯಾಲಯದ ನೌಕರರಿಗೆ ವಿಸ್ತರಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ನೌಕರರಿಗೆ ಅವಶ್ಯವಿರುವ "ಹೊಸ ಗುಂಪು ವಿಮಾ ಯೋಜನೆ"ಯನ್ನು ಅಳವಡಿಸುವ ಬಗ್ಗೆ ಭಾರತೀಯ ಜೀವ ವಿಮಾ ನಿಗಮದಿಂದ ಪ್ರಸ್ತಾಪವನ್ನು ಪಡೆಯಲಾಗಿದೆ. 18 ರಿಂದ 60 ವರ್ಷ ವಯಸ್ಸಿನ ಒಳಗಿರುವ ಎಲ್ಲಾ ಸಿಬ್ಬಂದಿಗಳೂ ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಈ ಯೋಜನೆಯ ಅಡಿಯಲ್ಲಿ ವರ್ಷಕ್ಕೆ 18,085 ರೂಗಳನ್ನು ವಿಶ್ವವಿದ್ಯಾಲಯವು ಪಾವತಿಸಬೇಕಿರುತ್ತದೆ. ಯಾವುದೇ ಸಿಬ್ಬಂದಿಯು ಮರಣ ಹೊಂದಿದಲ್ಲಿ ಅವರ ಕುಟುಂಬಸ್ಥರಿಗೆ 1.00ಲಕ್ಷ ರೂಗಳು ಲಭ್ಯವಾಗುತ್ತವೆ. ಇದರ ಕುರಿತಾದ ಸಮಗ್ರ ಮಾಹಿತಿಯೊಂದಿಗೆ ಈ ಯೋಜನೆಯ ಜಾರಿಗೆ ಅನುಮತಿ ನಿರೀಕ್ಷಿಸಿ ಪ್ರಶಾಸನ ಸಮಿತಿ ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ. | |
| ನಿರ್ಣಯ | **ಗುಂಪು ವಿಮೆ ಸೌಲಭ್ಯವನ್ನು ವಿಶ್ವವಿದ್ಯಾಲಯದ ನೌಕರರಿಗೆ ವಿಸ್ತರಿಸಲು ಸಭೆಯು ಅನುಮತಿಸಿತು. ನೌಕರರ ಮಾಸಿಕ ವೇತನದಲ್ಲಿ ಕಡಿತಗೊಳಿಸಿ ಈ ಮೊತ್ತವನ್ನು ಪಾವತಿಸಬಹುದಾಗಿದೆ. ಅಲ್ಲದೇ ಸರ್ಕಾರದ ನಿಯಮಾವಳಿಗಳ ಅನುಸಾರ, ಎಲ್ಲ ನೌಕರರಿಗೂ ಅವರವರ ವೇತನ ಶ್ರೇಣಿಗೆ ತಕ್ಕಂತೆ ಮರುಪಾವತಿಯಾಗುವ ಗುಂಪು ವಿಮೆ ಸೌಲಭ್ಯವನ್ನೂ ಆರಂಭಿಸಬಹುದಾಗಿದೆ ಎಂದು ಸಭೆಯು ಅಭಿಪ್ರಾಯಪಟ್ಟಿತು.** | |
| ವಿಷಯ 05 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 9ನೇ ಸ್ನಾತಕಪೂರ್ವ ದೀಕ್ಷಾಂತ ಸಮಾರಂಭವನ್ನು ನಡೆಸುವ ಬಗೆಗೆ.**<br>ಪ್ರತಿ ವರ್ಷದಂತೆಯೇ2018–19ನೇ ಸಾಲಿನಲ್ಲಿ ನಿವೃತ್ತರಾದ ಅಧ್ಯಾಪಕರಿಗೆ ಸನ್ಮಾನ ಮತ್ತು ಉತ್ತಮ ಪಾಠಶಾಲೆಗಳಿಗೆ ಪ್ರಶಸ್ತಿ ನೀಡುವ ನಿಟ್ಟಿನಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು 9ನೇ ಸ್ನಾತಕಪೂರ್ವ ದೀಕ್ಷಾಂತ ಸಮಾರಂಭವನ್ನು ಅಕ್ಟೋಬರ್ ತಿಂಗಳಿನಲ್ಲಿ ನಡೆಸುತ್ತದೆ. ಈ ಕಾರ್ಯಕ್ರಮಕ್ಕೆ ಅಂದಾಜು 3.00ಲಕ್ಷ ರೂಗಳು ವೆಚ್ಚವಾಗಬಹುದಾಗಿದೆ. ಈ ಮೊತ್ತಕ್ಕೆ ಅನುಮತಿ ಕೋರಿ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. | |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 9ನೇ ಸ್ನಾತಕಪೂರ್ವ ದೀಕ್ಷಾಂತ ಸಮಾರಂಭವು ಅಕ್ಟೋಬರ್ ತಿಂಗಳಿನಲ್ಲಿಯೇ ನಡೆಯಲಿರುವುದರಿಂದ ಶೀಘ್ರದಲ್ಲಿ ಸಭಾಂಗಣವನ್ನು ಕಾಯ್ದಿರಿಸಲು ತಿಳಿಸಲಾಗಿದೆ. ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ.** | |
| ವಿಷಯ 06 | **"ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009"ಕ್ಕೆ ತಿದ್ದುಪಡಿ ಮಾಡುವ ಬಗೆಗೆ.**<br>"ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009" ಕೆಲವು ಬದಲಾವಣೆಗಲನ್ನು ಅಳವಡಿಸಿಕೊಳ್ಳಲು ಪ್ರಶಾಸನ ಸಮಿತಿಯ 31ನೇ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆಕೆಲವು ಬದಲಾವಣೆಗಳನ್ನು ಮಾಡಿ, ದಿನಾಂಕ: 16.03.2016ರಂದು ನಡೆದ 32ನೇ ಪ್ರಶಾಸನ ಸಮಿತಿಯ ಸಭೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ನಿರ್ಣಯಿಸಲಾಗಿತ್ತು. ಅದರಂತೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಈ ಅಧಿನಿಯಮದ 12ನೇ ಪರಿಚ್ಛೇದದಲ್ಲಿ ಮಾತ್ರ ಬದಲಾವಣೆಯಾಗಿದ್ದು ರಾಜ್ಯಪಾಲರಿಂದ ಅನುಮೋದನೆಗೊಂಡಿರುತ್ತದೆ. ಆದ್ದರಿಂದ ಉಳಿದಂತೆ ಮಾಡಲಾದ ಬದಲಾವಣೆಗಳಿಗೆ ಅನುಮೋದನೆ ಪಡೆಯುವುದು ಅವಶ್ಯವಿದ್ದ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯನ್ನು ಪುನಃ ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆಯುವುದು ಅನಿವಾರ್ಯವಾಗಿದ್ದು ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ. | |
| ನಿರ್ಣಯ | **"ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009"ಕ್ಕೆ ಕೆಲವು ಬದಲಾವಣೆಗಳೊಂದಿಗೆ ತಿದ್ದುಪಡಿ ಮಾಡಿ, ಸರ್ಕಾರದ ಅನುಮತಿ ಪಡೆಯಲು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಪ್ಪಿದೆ.** | |
| ವಿಷಯ 07 | **ಪ್ರಸಾರಾಂಗದ 1ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಪ್ರಸಾರಾಂಗ ಸಲಹಾ ಸಮಿತಿಯ' 01ನೇ ಸಭೆಯು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 19.08.2019ರಂದು ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | |
| ನಿರ್ಣಯ | **ಪ್ರಸಾರಾಂಗದ 1ನೇ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿ ಸಭೆಯು ಅನುಮೋದಿಸಿತು.** | |
| ವಿಷಯ 08 | **UGC –Canara Bank Scholorship payment portal workshop ಗೆ ತೆರಳಿದ್ದಕ್ಕೆ ಪ್ರಯಾಣ ಭತ್ಯೆ ಪಾವತಿಸುವ ಬಗೆಗೆ.**<br>ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ | |

| | | |
|---|---|---|
| | ವಿದ್ಯಾರ್ಥಿಗಳಿಗೆ PFMS ಮುಖಾಂತರ Online ನಲ್ಲಿ scholorship ನೀಡುತ್ತದೆ. ಇದಕ್ಕೆ ಸಂಬಂಧಿಸಿದ Online portalನ ಬಗ್ಗೆ Workshop/Training Programme ನಡೆಸಲು ದಿನಾಂಕ: 15.06.2019ರಂದು ವಿಶ್ವವಿದ್ಯಾಲಯದ ಸಿಬ್ಬಂದಿ ಭಾಗವಹಿಸುವಂತೆ ಪತ್ರ ಬಂದಿರುತ್ತದೆ. ದಿನಾಂಕ: 18.06.2019 ಮತ್ತು 19.06.2019ರಂದು ನಡೆದ ಈ workshopಗೆ ವಿಶ್ವವಿದ್ಯಾಲಯದ ಕಂಪ್ಯೂಟರ್ ಆಪರೇಟರ್ ಆದ ಶ್ರೀ ನಾಗೇಂದ್ರಮೂರ್ತಿ – ಅವರನ್ನು ಕಳುಹಿಸಲಾಗಿತ್ತು. ಸಮಯಾಭಾವದಿಂದ ರೈಲ್ವೇಯಲ್ಲಿ ಪ್ರಯಾಣಿಸಲು ಸಾಧ್ಯವಾಗದ ಕಾರಣ ಇವರು ವಿಮಾನದಲ್ಲಿ ಪ್ರಯಾಣಿಸಿರುತ್ತಾರೆ. ಇವರ ಪ್ರಯಾಣ ವೆಚ್ಚ ಒಟ್ಟೂ – 15,301ರೂಗಳಾಗಿದ್ದು ಇದನ್ನು ಪಾವತಿಸಲು ಅನುಮತಿ ಕೋರಿ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. | |
| ನಿರ್ಣಯ | **UGC –Canara Bank Scholorship payment portal workshop ನ ವರದಿಯನ್ನು ಪಡೆದು ಇವರ ಪ್ರಯಾಣ ವೆಚ್ಚವನ್ನು ಪಾವತಿಸಲು ಸಭೆಯು ಒಪ್ಪಿದೆ.** | |
| ವಿಷಯ 09 | **ಅಧ್ಯಯನಾಂಗದಿಂದ ನಡೆಯುವ ಕಾರ್ಯಕ್ರಮಗಳ ದರವನ್ನು ನಿಗದಿ ಪಡಿಸುವ ಬಗೆಗೆ**<br>ಅಧ್ಯಯನಾಂಗದಿಂದ ನಡೆಸುವ ಕಾರ್ಯಕ್ರಮಗಳ ದರವನ್ನು ಪರಿಷ್ಕರಿಸಬೇಕಿರುತ್ತದೆ.<br>1. ಸಾಮಾನ್ಯ ಅಧ್ಯಾಪನ (ಕ್ಲಾಸ್) – 500/–<br>2. ಸಾಮಾನ್ಯ ಉಪನ್ಯಾಸ – 1000/–<br>3. ವಿಶೇಷ ಉಪನ್ಯಾಸ – 2000/– (ಜುಲೈ ತಿಂಗಳಿಂದ ಸರಣಿ ರೂಪದಲ್ಲಿ ನಡೆಯುತ್ತಿರುವ ವಾಚನ–ವ್ಯಾಖ್ಯಾನ ಕಾರ್ಯಕ್ರಮದಲ್ಲಿ ವಾಚನ/ವ್ಯಾಖ್ಯಾನಕಾರರಾಗಿ ಭಾಗವಹಿಸುತ್ತಿರುವ ವಿದ್ವಾಂಸರಿಗೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ 2000/– ನೀಡಲಾಗಿದ್ದು ಸಭೆಯಲ್ಲಿ ಈ ಸಂಬಂಧ ಅನುಮೋದನೆ ಕೋರಿದೆ.)<br>4. ಅಧ್ಯಯನ ಮಂಡಳಿ/ಪಾಠ್ಯಕ್ರಮ ರಚನೆ ಮುಂತಾದ ಸಭೆಯಲ್ಲಿ ಭಾಗವಹಿಸಿದವರಿಗೆ – 1000/– (ಅಧ್ಯಯನ ಮಂಡಳಿ ಮುಂತಾದ ಸಭೆಗಳಲ್ಲಿ ಭಾಗವಹಿಸುವ ವಿದ್ವಾಂಸರು ಬಾಹ್ಯ ರಾಜ್ಯಗಳಿಂದಲೂ ಆಗಮಿಸುವುದರಿಂದ 1000/–ಗಳನ್ನು ನೀಡಬಹುದಾಗಿದೆ.)<br>5. ಸೆಮಿನಾರ್‌ಗಳಲ್ಲಿ ಪತ್ರಿಕೆಯನ್ನು ಮಂಡಿಸುವರಿಗೆ –1000/– (ವಿಶ್ವವಿದ್ಯಾಲಯದಿಂದ ಆಹ್ವಾನಿತರಾದವರಿಗೆ ಮಾತ್ರ)<br>6. ಸೆಮಿನಾರ್‌ಗಳಲ್ಲಿ ಸತ್ರಾಧ್ಯಕ್ಷರಿಗೆ –1500/– (ವಿಶ್ವವಿದ್ಯಾಲಯದಿಂದ ಆಹ್ವಾನಿತರಾದವರಿಗೆ ಮಾತ್ರ)<br>7. ಎಂ.ಫಿಲ್ ತರಗತಿಗಳ ಸಂಶೋಧನಾ ಪ್ರಬಂಧದ ಮೌಲ್ಯಮಾಪಕರಿಗೆ –1000/– (ಎಂ.ಫಿಲ್ ಪ್ರಬಂಧ ಮೌಲ್ಯಮಾಪನಕ್ಕೆ ಈಗ ಕೇವಲ 100/– ಗಳನ್ನು ನೀಡುತ್ತಿದ್ದು, ಪಿಎಚ್.ಡಿ ಪ್ರಬಂಧ ಮೌಲ್ಯಮಾಪನಕ್ಕೆ 2000/– ಹಾಗೂ ಡಿ.ಲಿಟ್ ಪ್ರಬಂಧ ಮೌಲ್ಯಮಾಪನಕ್ಕೆ 2500/– ನಿಗದಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಂ.ಫಿಲ್ ಪ್ರಬಂಧ ಮೌಲ್ಯಮಾಪನದ ಮೊತ್ತವನ್ನು ಹೆಚ್ಚಿಸಲು ಅನುಮತಿ ಕೋರಿದೆ.)<br>8. ಅತಿಥಿ ಉಪನ್ಯಾಸಕರ ಅಥವಾ ಪ್ರಾಜೆಕ್ಟ್‌ಗಳಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲು ಅಧ್ಯಯನಾಂಗದಿಂದ ನಡೆಯುವ ಸಂದರ್ಶನಗಳಲ್ಲಿ ಸಂದರ್ಶಕರಿಗೆ ನೀಡುವ ಮೊತ್ತ – 500/–<br>ಮೇಲ್ಕಂಡ ದರ ಪರಿಷ್ಕರಣೆಗೆ ಸಭೆಯಲ್ಲಿ ಅನುಮೋದನೆ ಕೋರಿದೆ. | |
| ನಿರ್ಣಯ | **ಮೇಲ್ಕಂಡ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಾಂಗದಿಂದ ನಡೆಯುವ ಕಾರ್ಯಕ್ರಮಗಳ ದರವನ್ನು ನಿಗದಿ ಪಡಿಸಲು ಸಭೆಯು ಬೇರೆ ವಿಶ್ವವಿದ್ಯಾಲಯಗಳ ನಿಯಮಗಳನ್ನು ಪರಿಶೀಲಿಸಿ ಮೊತ್ತವನ್ನು ನಿಗದಿಪಡಿಸಲು ಒಪ್ಪಿದೆ.** | |
| ವಿಷಯ 10 | **ಶ್ರೀ ವನರಾಜ ಬಿ.ಕೆ, ಸಹಾಯಕ ಪ್ರಾಧ್ಯಾಪಕರು – ಇವರ ಮೇಲೆ ಕ್ರಮ ಕೈಗೊಳ್ಳುವ ಬಗೆಗೆ.**<br>ಇವರ ಮೇಲೆ ಪ್ರೊ. ಶಿವಾನಿ. ವಿ ಇವರು ದಿನಾಂಕ: 27.06.2019ರಂದು ಮಹಿಳಾ ದೌರ್ಜನ್ಯ ತಡೆ ಸಮಿತಿ ಇಲ್ಲಿಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಅನ್ವಯ "ಆಂತರಿಕ ವಿಚಾರಣಾ ಸಮಿತಿಯಲ್ಲಿ" ಸಂಬಂಧಿಸಿದ ದೂರಿನ ವಿಷಯದ ಬಗ್ಗೆ ವಿಚಾರಣೆ ಮಾಡಲಾಗಿರುತ್ತದೆ. ವಿಚಾರಣೆ ಸಂದರ್ಭದಲ್ಲಿ ಶ್ರೀ ವನರಾಜ ಬಿ.ಕೆ ಇವರು ತಪ್ಪನ್ನು ಸ್ವತಃ ಒಪ್ಪಿಕೊಂಡಿದ್ದು, ಮುಂದಿನ ದಿನಗಳಲ್ಲಿ | |

| | | |
|---|---|---|
| | ತಪ್ಪನ್ನು ಮಾಡುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ಈ ಸಂಬಂಧ ವಿಚಾರಣಾ ಸಮಿತಿಯು ತೀರ್ಮಾನಗಳಂತೆ ವನರಾಜು ಬಿ.ಕೆ ಇವರಿಗೆ ಒಂದು ವಾರ್ಷಿಕ ಬಡ್ತಿಯನ್ನು ಹಿಂಪಡೆಯಬೇಕಾಗಿದೆ. ವಿಶ್ವವಿದ್ಯಾಲಯ ಅಧಿನಿಯಮಗಳ ನಿಯಮ ಸಂಖ್ಯೆ: 22, ಅನುಚ್ಛೇದ 17ರ ಹಾಗೂ 13 ಅನುಚ್ಛೇದ 4(ಬಿ) ಗಳ ಅನ್ವಯ ವಿಶ್ವವಿದ್ಯಾಲಯದ ಶಿಕ್ಷಕರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರವು ಪ್ರಶಾಸನ ಸಮಿತಿಗೆ ಮಾತ್ರ. ಇರುವುದು. ಆದ್ದರಿಂದ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ. | |
| ನಿರ್ಣಯ | **ಶ್ರೀ ವನರಾಜ ಬಿ.ಕೆ, ಸಹಾಯಕ ಪ್ರಾಧ್ಯಾಪಕರು – ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿದು ಆದೇಶಿಸಲು ಸಭೆಯು ನಿರ್ಣಯಿಸಿದೆ.** | |

ಪ್ರೊ. ವೀರನಾರಾಯಣ ಎನ್. ಕೆ ಪಾಂಡುರಂಗಿ

**ಕುಲಸಚಿವರು**

ಪ್ರೊ. ವಿ. ಗಿರೀಶ್ ಚಂದ್ರ

**ಕುಲಪತಿಗಳು**